**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ**

**ಓ.ಎಸ್. ನಂ. 175/2021**

**ಪಿಡಬ್ಲೂ – 1**

**ಸಾಕ್ಷಿಯು ದಿಃ 02.09.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ : ವಾದಿ ಪರ ಶ್ರೀ ಎ.ಸಿ.ಎಸ್ ವಕೀಲರಿಂದ**

ನಾನು ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳನ್ನು ನಾನೇ ಹೇಳಿ ಬರೆಯಿಸಿ ತಿಳಿದುಕೊಂಡಿರುತ್ತೇನೆ ಹಾಗೂ ಈ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣ ಮಾಡಿ ಸಹಿ ಮಾಡಿರುತ್ತೇನೆ. ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಮಾಡಿರುತ್ತೇನೆ. ಅವುಗಳನ್ನು ನಿಶಾನೆಯಾಗಿ ಗುರುತಿಸುವಂತೆ ಕೋರುತ್ತೇನೆ.

ಪಂಚಾಯತಿಯವರು ನೀಡಿರುವ ಪತ್ರವನ್ನು ಹಾಜರುಪಡಿಸಿರುತ್ತೇನೆ, ಅದನ್ನು ನಿಪಿ 4 ಎಂದು, ಪೊಲೀಸರು ನೀಡಿರುವ ಸ್ವೀಕೃತಿಯನ್ನು ಹಾಜರುಪಡಿಸಿರುತ್ತೇನೆ, ಅದನ್ನು ನಿಪಿ 5 ಎಂದು, ಡಿಮಾಂಡ್ ರಿಜಿಸ್ಟರ್ ನ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ 6 ಮತ್ತು 7 ಎಂದು, ಫೋಟೋಗಳನ್ನು ಮತ್ತು ಸಿಡಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ 8 ರಿಂದ 14 ಎಂದು ಗುರ್ತಿಸಲಾಯಿತು. ಉಳಿದಂತೆ ಈ ಹಿಂದೆ ದಿಃ

21.04.2023 ರಂದು ನಿಶಾನೆಗೊಳಿಸಿಕೊಂಡಿರುವ ನಿಪಿ 1 ಹಿಂಬರಹ, ನಿಪಿ 2 ತಕರಾರು ಅರ್ಜಿಯ ದೃಡೀಕೃತ ನಕಲು ಮತ್ತು ನಿಪಿ 3 ಇ-ಸ್ವತ್ತನ್ನು ತನ್ನ ಸಾಕ್ಷ್ಯದ ಭಾಗವನ್ನಾಗಿ ಪರಿಗಣಿಸಬೇಕೆಂದು ಕೋರಿರುತ್ತೇನೆ. ಪರಿಶೀಲಿಸಿ ಪರಿಗಣಿಸಲಾಗಿರುತ್ತದೆ.

**ಪಾಟೀ ಸವಾಲುಃ** ಪ್ರತಿವಾದಿಗಳು ಏಕತರಪೀಯವಾಗಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ